

ಹಣ್ಣು ಹಂಪಲಗಳ ರುಚಿ.

(ಸವಿಗಾರ—ಗಿಣಿರಾಮು)

ಬರದೇ ಇದ್ದರೆ
ಗಿಣಿರಾಮನ ಹತ್ತರಕ್ಕೆ ಹಣ್ಣು ಹಂಪಲಗಳು ಹೋಗಲಿಕ್ಕೆಬೇಕು!
ಹಣ್ಣು ಹಂಪಲದ ಹತ್ತರಕ್ಕೆ ಗಿಣಿ ರಾಮನು ಅರಗಿಳಿಯು ಕಡೆಗಲ್ಲವೇ
ಅದರೊಳಗೂ ಪಂಜರದಲ್ಲಿ ವಿರಾಜಿಸುವ ಮರಗಿಳಿಗಳನ್ನು
ಹಣ್ಣು ಹಂಪಲ ತಾವಾಗಿ ಬರುವವು? ನಮ್ಮಂಥ ಹುಡುಕಿಕೊಳ್ಳ
ಕೇಳುವವರಾರು? ನಮ್ಮ ಆಹಾರವನ್ನು ನಾವೇ ಹರವಾದ ದೇವ
ಲಿಕ್ಕೆ ಬೇಕು? ಹಣ್ಣುಗಾರರ ಅಂಗಡಿಗಳಿಗಿಂತ ಬನಗಳಲ್ಲಿಯೂ ನ
ರಾಯನ ತೋಟ ಪಟ್ಟಿಗಳಲ್ಲಿಯೂ ತೋಪು ಹಣ್ಣುಗಳನ್ನು
ನ್ನು ರೆಕ್ಕೆಯ ಬಲದಿಂದ ಹಾರಾಡಿ ನಮಗೆ ತಕ್ಕ

" ಬಿನ್ನಹ " ವೆಂಬ ಈ ಹಣ್ಣು ಬೆಂಗಳೂರಿನ 'ಶ್ರೀನಿವಾಸ' ನ
ನಾಲಿಗೆ ಬಳ್ಳಿಗೆ ಮೊನ್ನೆ ಮೊನ್ನೆ ಬಿಟ್ಟಿತು. ಈ ಹಣ್ಣು ಕಲಮಿನ
ಹಣ್ಣು. ಅಷ್ಟು ಪಾಡಲ್ಲದಿದ್ದರೂ, ಅಷ್ಟು ಕಾಡೂ ಅಲ್ಲ. ದೇಶೀ
ಜಾತಿ; ರೀತಿಮಾತ್ರ ಹೊಸದು. ಆಹುದೋ ಅಲ್ಲವೋ ನೋಡಿರಿ.

ಕನಕ ಪುರಂದರ ಚಂಡಿನಾನಕರ
ವಿನುತ ಕಬೀರ ರವೀಂದ್ರ ಕವೀಂದ್ರರ
ಮನೆಯೂಳಿಗದೋರ್ವ ಬಾಲನವರ
ಇಸಿನುಡಿಯು ತೆರದಿ ನುಡಿಯಲು ತೊಡಗಿದೆ ॥

ನೋಡಲು ಸಿಕ್ಕಿಲ್ಲ.

ಬೇಂದ್ರೆಯವರು 'ದ.ರಾ. ಬೇಂದ್ರೆ' ಎಂಬ ಹೆಸರಿನಲ್ಲಿ ಗದ್ಯ ಬರಹಗಳು -ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅದು ಮಾತ್ರವಲ್ಲದೆ ಕೆಲವೆಡೆ ಪೂರ್ಣ ಹೆಸರು 'ದತ್ತಾತ್ರೇಯ ರಾಮಚಂದ್ರ ಬೇಂದ್ರೆ' ಎಂಬ ಹೆಸರಿನಲ್ಲಿ ಪುಸ್ತಕಗಳಿವೆ. 'ಗೆಳೆಯರ ಗುಂಪಿನಿಂದ ಪ್ರಕಟವಾದ 'ಹಕ್ಕಿ ಹಾರುತಿದೆ' (1930) ಗ್ರಂಥದ ಸಂಪಾದಕರು 'ಬೇಂದ್ರೆ ದತ್ತರಾಯರು'. 'ಈ ಗ್ರಂಥದ ಒಡೆತನವು ಮಂಡಲದ ಕಡೆಗೆ; ಕವಿತೆಗಳ ಒಡೆತನವು ಬರೆದವರ ಕಡೆಗೆ' ಎಂಬ ಉಲ್ಲೇಖ ಇರುವ 'ಹಕ್ಕಿ ಹಾರುತಿದೆ' ಸಂಗ್ರಹದಲ್ಲಿ ಅಂಬಿಕಾತನಯದತ್ತರ 'ಅಂದು ಇಂದು', 'ಹಕ್ಕಿ ಹಾರುತಿದೆ', 'ತುತ್ತೀನ ಚೀಲ', 'ಮೂವತ್ತುಮೂರು ಕೋಟಿ', 'ಕನಸಿನೊಳಗೊಂದು ಕಣಸು' ಕವಿತೆಗಳಿವೆ. ಇವುಗಳ ಜೊತೆಗೆ ಗೆಳೆಯರ ಗುಂಪಿನ ಕವಿಗಳಾದ ಸಾಲಿ ರಾಮಚಂದ್ರರಾಯರು, ಮಧುರಚೆನ್ನ, ಶ್ರೀಧರ ಖಾನೋಳಕರ್, ನಾರಾಯಣ ಸಂಗಮ, ವಿ.ಕೃ.ಗೋಕಾಕ, ಆನಂದಕಂದ (ಬೆಟಗೇರಿ ಕೃಷ್ಣಶರ್ಮ), ಪಿ. ಧೂಲಾ ಸಾಹೇಬ್ ಸೇರಿದಂತೆ ಹಲವರ ಕವಿತೆಗಳಿವೆ.

ಈ ಸಂಕಲನದಲ್ಲಿ ಇರುವ ಬೇಂದ್ರೆಯವರ ಪ್ರಸಿದ್ಧ ಕವಿತೆಗಳಲ್ಲಿ ಒಂದಾದ 'ಕನಸಿನೊಳಗೊಂದು ಕಣಸು' 'ಜಯಕರ್ನಾಟಕ' ಪತ್ರಿಕೆಯಲ್ಲಿ (ಸಂಪುಟ 4 ಸಂಚಿಕೆ 3, 1925 ಡಿಸೆಂಬರ್) 'ಗೆಳೆಯರ ಗುಂಪಿನಿಂದ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಹೀಗೆ 'ಗೆಳೆಯರ ಗುಂಪಿನಿಂದ' ನಾಮಾಂಕಿತದಲ್ಲಿ ಅಂಬಿಕಾತನಯದತ್ತರ ಹಲವು ಕವಿತೆಗಳು ಪ್ರಕಟವಾಗಿವೆ. ಕವಿಯು ಅವುಗಳನ್ನು ನಂತರದ ವಿವಿಧ ಸಂಕಲನಗಳಲ್ಲಿ ಸೇರಿಸಿದ್ದರಿಂದ ನಮಗೆ ಅವು 'ಅಂಬಿಕಾತನಯದತ್ತ'ರ ಕವಿತೆಗಳು ಅಂತ ಗೊತ್ತಾಗುತ್ತಿದೆ. ಹೀಗೆ ಗೊತ್ತಾಗದೆ ಇರುವ ಕವಿತೆಗಳು ಕೂಡ ಇವೆ.

ಬೇಂದ್ರೆಯವರ 'ಶ್ರೀಲಕ್ಷ್ಮೀಶನ ಜೈಮಿನಿ ಭಾರತಕ್ಕೆ ಮುನ್ನುಡಿ'ಯು ಮತ್ತೊಂದು ಮಹತ್ವದ ಗ್ರಂಥ. 1954ರಲ್ಲಿ ಬರೆದ ಈ ಕೃತಿಯು ಕನ್ನಡ ಕಾವ್ಯ ಪರಂಪರೆಯ ಜೀವಂತಿಕೆ ನೆನಪಿಸಿದ ಕೃತಿ. ಈ ಪುಸ್ತಕದಲ್ಲಿ ಬೇಂದ್ರೆಯವರು ಹೆಸರು 'ಬೇಂದ್ರೆ, ದತ್ತ, ರಾಮ' ಎಂದಾಗಿತ್ತು.

ಬೇಂದ್ರೆಯವರು ಸಂಭಾಷಣೆ ಮತ್ತು ಗೀತೆಗಳನ್ನು ಏಕೈಕ ಚಲನಚಿತ್ರ 'ವಿಚಿತ್ರ ಪ್ರಪಂಚ'. ಈ ಚಿತ್ರಕ್ಕಾಗಿ ಬೇಂದ್ರೆಯವರು ಎಂಟು ಹಾಡುಗಳನ್ನು ರಚಿಸಿದ್ದರು. ಹಾಗೆಯೇ ಚಿತ್ರದ ಸಂಭಾಷಣೆಯ ರಚನೆಯೂ ವರಕವಿಗಳದ್ದೇ ಆಗಿತ್ತು. 1953ರಲ್ಲಿ ತೆರೆಕಂಡ ಈ ಚಿತ್ರದ ಟೈಟಲ್ ಕಾರ್ಡ್‌ನಲ್ಲಿನ